

## ನಕ್ಕುಬಿಡಿ

**ಅದೇನು ಮಾಡ್ತಿ?**

ಸಂತಾ: ನನ್ನ ಹೆಂಡತಿಗೆ ಮನೆಗೆಲಸದಲ್ಲಿ ದಿನಾಲೂ ನಾನು ಸಹಾಯ ಮಾಡುತ್ತೇನೆ.

ಬಂತಾ: ಹೌದಾ? ಅದೇನು ಮಾಡ್ತಿ?

ಸಂತಾ: ಅವಳು ಕಸ ಗುಡಿಸುವಾಗ ಕುರ್ಚಿ ಮೇಲೆ ಕಾಲುಗಳನ್ನೆತ್ತಿಕೊಂಡು ಕುಳಿತುಕೊಳ್ಳುತ್ತೇನೆ!

★★★

**ಏನಿವು?**

ಬಾಲಕ ಸಂತಾನಿಗೆ ಪಾಠದ ಕಡೆ ಗಮನವಿರದಿದ್ದುದನ್ನು ಕಂಡ ಟೀಚರ್ ಗದರಿದರು.

ಟೀಚರ್: ಮೇಲಕ್ಕೇಳು 10, 18, 20 ಏನಿವು ಹೇಳು?

ಸಂತಾ: ತೊದಲುತ್ತ ನುಡಿದ; ಟೆನ್ ಸ್ಪೋರ್ಟ್ಸ್, ಡಿಸ್ಕವರಿ ಚಾನೆಲ್, ಪೋಗೋ ಮೇಡಂ.

★★★

**ಏನು ಇಟ್ಕೊಂಡು?**

ಸಂತಾ: ನಾನು ಹೊಸದಾಗಿ ಕಾದಂಬರಿ ಬರೆಯುತ್ತಿದ್ದೇನೆ.

ಬಂತಾ: ಏನು ಇಟ್ಕೊಂಡು?

ಸಂತಾ: ಮತ್ತೇನು? ಪೆನ್ನು ಇಟ್ಕೊಂಡು!

★★★

**ಏನು ಇಷ್ಟವಾಯಿತು?**

ಸಂತಾ: ನಿನ್ನೆಯ ಕವಿಗೋಷ್ಠಿಯಲ್ಲಿ ನಿನಗೆ ಯಾವ ಭಾಗ ಇಷ್ಟವಾಯಿತು?

ಬಂತಾ: ವಂದನಾರ್ಪಣೆ.

★★★

**ಅವಕಾಶ ನೀಡಲ್ಲ**

ಆಕೆ: ಏನೇ, ನೀನು ಮೆಚ್ಚಿದ ಹುಡುಗ ಚೆನ್ನಾಗಿದ್ದಾನೆ. ಆದ್ರೆ ಮಾತಾಡಿದ್ರೆ ಬಾಯಿಯಿಂದ ದುರ್ವಾಸನೆ ಬರುತ್ತಲ್ಲೆ.

ಈಕೆ: ನಾನು ಮದುವೆಯಾದ್ಮೇಲೆ ಮಾತಾಡಕ್ಕೆ ಅವಕಾಶ ನೀಡಲ್ಲ ಬಿಡು.

★★★

**ಗೊತ್ತಾಗಲಿಲ್ಲ!**

ಸಂತಾ ಸಾಲ ಮಾಡಿ ಟ್ರ್ಯಾಕ್ಟರ್ ತಗೊಂಡಿದ್ದ. ಸಾಲ ಮರು ಪಾವತಿ ಮಾಡದ ಕಾರಣ ಬ್ಯಾಂಕಿನವರು ಟ್ರ್ಯಾಕ್ಟರ್ ತೆಗೆದುಕೊಂಡು ಹೋದರು.

ಸಂತಾ ತನ್ನಷ್ಟಕ್ಕೇ ಗೊಣಗಿಕೊಂಡ: ಹೀಗಾಗುತ್ತೆ ಅಂತ ಗೊತ್ತಿದ್ದರೆ ನನ್ನ ಮದುವೆಗೂ ಬ್ಯಾಂಕಿನಲ್ಲಿ ಸಾಲ ತೆಗೆದುಕೊಳ್ಳುತ್ತಿದ್ದೆ.

(ಸಂಗ್ರಹ) **ಪ್ರಕಾಶ. ಎಸ್. ಮನ್ನಂಗಿ**

---

ತಂದೆ ಜೊತೆ ಏನೋ ಹೇಳಬೇಕೆಂದು ಚಡಪಡಿಸುತ್ತಿದ್ದ ಚಂದ್ರು. ಮಗನ ಅವಸ್ಥೆ ನೋಡಿ, 'ಬೇಗ ಹೇಳು ಏನೂಂತ. ಒಂದು ಗಂಟೆ ಅವಧಿ ನನಗೆ ಸಾವಿರ ರೂಪಾಯಿಗೆ ಸಮಾನ. ಆದ್ರೂ ನಿನಗೆ ಹತ್ತು ನಿಮಿಷ ಕೊಡ್ತಾ ಇದ್ದೇನೆ. ಏನು ವಿಷಯ' ತಂದೆ ಕೇಳಿದರು.

'ಅಪ್ಪಾ! ನನಗೆ ನೀವು ಕೊಡೋ ಆ ಹತ್ತು ನಿಮಿಷಗಳನ್ನು ಹಣದ ರೂಪದಲ್ಲಿ ಕೊಟ್ಟು ಬಿಡಿ ಸಾಕು.'

(ಸಂಗ್ರಹ) **ರಾಮ್ ಪ್ರಸಾದ್. ಬಿ.**


WIZTOONZ
college of media & design

Kick start your CAREER - Become a most sought after

MULTIMEDIA PROFESSIONAL

100% JOB

Assistance Programs

Why we are so sure?

ಇದು ಕೇವಲ ಸರಿಯಾದ ಪ್ರಮಾಣದಲ್ಲಿರುವ 4 ಪ್ರಮುಖ ಅಂಶಗಳು ಅವು ಯಾವುದೇ ಕೌಶಲ್ಯ ಮಟ್ಟದ ಉದ್ಯೋಗದಲ್ಲಿ ಪ್ರಮುಖ ಪಾತ್ರವಹಿಸುತ್ತವೆ.

ಉತ್ತಮ ಗುಣಮಟ್ಟದ ತರಬೇತಿ – ತರಬೇತುದಾರರ ನಡತೆ – ಆಕರ್ಷಕವಾದ ಪೋರ್ಟ್‌ಫೋಲಿಯೋ – ಉದ್ಯಮದ ಬೇಡಿಕೆ

ನಮ್ಮ ಕಾರ್ಯಕ್ರಮಗಳು ಮೇಲೆ ತಿಳಿಸಿರುವ ಎಲ್ಲಾ ಅಂಶಗಳ ಸರಿಯಾದ ಮಿಶ್ರಣದಿಂದ ವಿಶೇಷವಾಗಿ ವಿನ್ಯಾಸಗೊಂಡಿವೆ ಮತ್ತು ಭಾರತ ದೇಶದಾದ್ಯಂತ 30 ಕಂಪನಿಗಳೊಂದಿಗೆ ಇರುವ ನಮ್ಮ ಸಂಬಂಧ ಪ್ರಬಲವಾದ ಕ್ಯಾಂಪಸ್ ಪ್ಲೇಸ್‌ಮೆಂಟ್ ರೆಕಾರ್ಡ್‌ನೊಂದಿಗೆ ಬೇಡಿಕೆ ಮತ್ತು ಪೂರೈಕೆ ಇವೆರಡರ ಮಧ್ಯೆ ಸೇತುವೆಯಂತೆ ಪಾತ್ರ ವಹಿಸುತ್ತವೆ.



Advanced Diploma in Visual Communication
Duration-18 Months
Eligibility: Degree/Engineer /Diploma (Pass/Fail)

Diploma in Animation & Visual Effects
Duration-24 Months
Eligibility: 17+ yrs

Diploma in Visual Effects (VFX)
Duration-12 Months
Eligibility: 17+ yrs

WIZTOONZ College of Media & Design
13th Cross, 3rd Phase, JP Nagar, Bangalore - 560 078
www.wiztoonz.com facebook.com/wiztoonz
For admission, call: +91 90198 84884